

ಪರಾಗ ಸ್ಪರ್ಶ
ಶ್ರೀವತ್ಸ ಜೋಶಿ
srivathsajoshi@yahoo.com

ಇವತ್ತು ರಾಜಕೀಯ ಅಂದರೆ ರಾವಣ, ಜರಾಸಂಧ, ಕೀಚಕ, ಯಮ ಅಂಥವರೇ ಅದರಲ್ಲಿರೋದು ಎನ್ನುವಷ್ಟು ಹದಗೆಟ್ಟಿರುವಾಗ ಆ ಕೆಸರಿನ ಕೊಳಕ್ಕಿಳಿದಿರುವ ನೀನು 'ನಳಿನೀಪತ್ರಮಿವಾಂಭಸಿ' ಅಂದರೆ ಕೆಸರಿನಲ್ಲಿನ ಕಮಲದೆಲೆಯಂತಾಗು. ಇನ್ನೂ ಆಶಾವಾದದಿಂದ ಹೇಳುವುದಾದರೆ- ಕೊಚ್ಚೆಸಮುದ್ರವನ್ನು ಉಲ್ಲಂಘಿಸಿ, ಕಳೆದುಹೋಗಿರುವ ಸ್ವಚ್ಛ-ಸಮರ್ಥ-ಶಿಸ್ತಿನ ರಾಜಕಾರಣವೆಂಬ ಸೀತೆಯನ್ನು ಹುಡುಕಿತರುವ ಹನುಮಂತನಾಗು!

# ಜನಸೇವೆಗೆ ಹೊರಟಿಹ ಜನಾರ್ದನ ಸ್ವಾಮಿಗೆ ಜೈ ಹೋ!

ಆತ್ಮೀಯ ಸ್ನೇಹಿತ ಜನಾರ್ದನ ಸ್ವಾಮಿಗೆ, ಅಭಿನಂದನೆಗಳು ಮತ್ತು ಶುಭಾಶಯಗಳು!

ಈ ಪತ್ರವನ್ನು ನಾನು ನಿನಗೆ ಖಾಸಗಿಯಾಗಿ ಬರೆದು ಕಳುಹಿಸಬಹುದಿತ್ತು, ಆದರೆ ಈ ವಾರದ ನನ್ನ ಅಂಕಣಲೇಖನವಾಗಿ ಬರೆಯುವುದಕ್ಕೆ ಆಯ್ದುಕೊಂಡಿದ್ದೇನೆ. ಹೀಗೆ ಮಾಡಲು ಎರಡು ಕಾರಣಗಳಿವೆ- ಒಂದನೆಯದಾಗಿ ಇದರಲ್ಲಿ ಖಾಸಗಿ ಅಥವಾ ವೈಯಕ್ತಿಕ ವಿಚಾರಗಳೇನೂ ಇಲ್ಲ; ಎರಡನೆಯದಾಗಿ ಹಾಗೂ ಮುಖ್ಯವಾಗಿ, ಇಲ್ಲೊಂದು ನಿರ್ದಿಷ್ಟ ಉದ್ದೇಶವಿದೆ. ಅದೇನೆಂದು ತಿಳಿಸಲು ಒಂದು ಎನಾಲಜಿ (ಹೋಲಿಕೆ)ಯನ್ನು ಬಳಸುತ್ತೇನೆ.

ರಾಮಾಯಣದಲ್ಲಿ ಒಂದು ಸನ್ನಿವೇಶ ಬರುತ್ತದೆ. ಸೀತೆಯನ್ನು ಹುಡುಕುತ್ತ ಹೊರಟ ವಾನರಸೈನ್ಯ ದಕ್ಷಿಣದಲ್ಲಿ ಸಮುದ್ರತೀರವನ್ನು ತಲುಪುತ್ತದೆ. ಸಮುದ್ರದಾಚೆಗೆ ಲಂಕೆ ಇದೆ, ಅಪಹೃತಳಾದ ಸೀತೆ ಅಲ್ಲಿದ್ದಾಳೆಂದು ಅಂದಾಜಿಸಲಾಗಿದೆ. ಆದರೆ ಲಂಕೆಯನ್ನು ತಲುಪುವುದು ಹೇಗೆ? ಸಮುದ್ರವನ್ನು ದಾಟುವುದು ಹೇಗೆ? ವಾನರವೀರರೆಲ್ಲ ಮೊದಮೊದಲು ನಾ ಹಾರಬಲ್ಲೆ ತಾ ಹಾರಬಲ್ಲೆ ಎಂದು ಕೊಚ್ಚಿಕೊಳ್ಳುತ್ತಾರಾದರೂ ಅಷ್ಟು ವಿಶಾಲವಾದ ಸಮುದ್ರವನ್ನು ನೋಡಿ ಅವರಿಗೆ ಹೆದರಿಕೆಯಾಗುತ್ತದೆ. ಹನುಮಂತ ಮಾತ್ರ ಯೋಚನೆ ಮಾಡುತ್ತ ಒಂದು ಬಂಡೆಕಲ್ಲಿನ ಮೇಲೆ ಕುಳಿತಿದ್ದಾನೆ. ತಾನು ಹಾರಬಲ್ಲೆ ಎಂದು ಅವನಿಗೆ ಧೈರ್ಯವೇನೊ ಇದೆ, ಆದರೂ ಹಿಂಜರಿತ. ಆ ಸಂದರ್ಭದಲ್ಲಿ ವಾನರ ಸೇನೆಯ ಇನ್ನೊರ್ವ ಹಿರಿಯ ಯೋಧ ಜಾಂಬವಂತ, ಹನುಮನ ಬಳಿಸಾರಿ ಅವನನ್ನು ಹುರಿದುಂಬಿಸುವ ಮಾತುಗಳನ್ನಾಡುತ್ತಾನೆ. ಲೋಕದಲ್ಲೆಲ್ಲ ಪ್ರಚಂಡವೀರ ಎಂದೆನಿಸಿದ ಹನುಮನೊಬ್ಬನಿಂದಲೇ ಈ ಕೆಲಸ ಸಾಧ್ಯ ಎಂದು, ಈ ಹಿಂದೆ ಪ್ರದರ್ಶಿತವಾದ ಅವನ ಸಾಹಸ-ಸಾಮರ್ಥ್ಯಗಳನ್ನು ನೆನಪಿಸಿ ಅವನಿಗೆ ಮನದಟ್ಟು ಮಾಡುತ್ತಾನೆ. ಅವನ ಸುಪ್ತಶಕ್ತಿಯನ್ನು ಜಾಗೃತಗೊಳಿಸುತ್ತಾನೆ. ಆಮೇಲೆ ಹನುಮಂತ ಸಾಗರೋಲ್ಲಂಘನ ಮಾಡುತ್ತಾನೆ... ಸೀತೆಯನ್ನು ಹುಡುಕುವಲ್ಲಿ ಯಶಸ್ವಿಯಾಗುತ್ತಾನೆ... ಲಂಕೆಯಲ್ಲಿ ಸಾಕಷ್ಟು ದಾಂಧಲೆಯೆಬ್ಬಿಸಿ, ಸೀತಾಮಾತೆಯ ಬಳಿ ರಾಮ-ಲಕ್ಷ್ಮಣರನ್ನು ಕರೆತರುತ್ತೇನೆ ಎಂದು ಸಮಾಧಾನ ಹೇಳಿ, ಮಹೇಂದ್ರಗಿರಿಗೆ ವಾಪಸಾಗುತ್ತಾನೆ... ರಾಮಾಯಣ ಕಥೆ ಮುಂದುವರೆಯುತ್ತದೆ.

ಆದರೆ ವಾಲ್ಮೀಕಿ ಏಕೆ ಈ ಸನ್ನಿವೇಶವನ್ನು ಸೃಷ್ಟಿಸಿದ? ಜಾಂಬವಂತನಿಂದ ವೀರಾಂಜನೇಯನ ಗುಣಗಾನವನ್ನೇಕೆ ಮಾಡಿಸಿದ? ಆ ಸೂಕ್ಷ್ಮವನ್ನು ನಾವು ಗಮನಿಸಬೇಕು. ಎಷ್ಟೋಸರ್ತಿ ಒಬ್ಬ ವ್ಯಕ್ತಿಯಲ್ಲಿರುವ ಪ್ರಚ್ಛನ್ನಶಕ್ತಿ ಆ ವ್ಯಕ್ತಿಗೇ ಗೊತ್ತಿರುವುದಿಲ್ಲ, ಒಂದುವೇಳೆ ಗೊತ್ತಿದ್ದರೂ ಸುತ್ತಲ ಪ್ರಪಂಚಕ್ಕೆ ಅದರ ಅರಿವಿರುವುದಿಲ್ಲ. ಇಲ್ಲಿ ಹನುಮಂತನ ಶಕ್ತಿಸಾಮರ್ಥ್ಯಗಳನ್ನು ಜಾಂಬವಂತನಿಂದ ಹೇಳಿಸಿ ಅದು ಹನುಮಂತನಿಗೂ, ಇಡೀ ಜಗತ್ತಿಗೂ ತಿಳಿಯುವಂತೆ ಮಾಡಿದ್ದು ವಾಲ್ಮೀಕಿಯ ಜಾಣ್ಮೆ! ಇರಲಿ, ನಾನು ಜಾಂಬವಂತನಲ್ಲ, ವಾಲ್ಮೀಕಿಯೂ ಅಲ್ಲ, ಅವರ ಉಗುರಿನ ತುದಿಯ ಯೋಗ್ಯತೆ ನನಗಿಲ್ಲ, ಆದರೆ ಇವತ್ತಿನ ಸಂದರ್ಭಕ್ಕೆ, ಕಳೆದ ಇಪ್ಪತ್ತೆರಡು ವರ್ಷಗಳಿಂದಲೂ ನನ್ನೊಬ್ಬ ಆತ್ಮೀಯ ಮಿತ್ರನಾಗಿರುವ ನಿನ್ನ ಬಗ್ಗೆ ನಿನಗೇ ತಿಳಿಸಲು ಮತ್ತು ಅದು ಇತರರಿಗೂ ತಿಳಿಯುವಂತಾಗಲು ಈ ಹೋಲಿಕೆಯನ್ನು ಬಳಸಿಕೊಂಡಿದ್ದೇನೆ, ಅಷ್ಟೇ.

ದಾವಣಗೆರೆಯ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನನಗಿಂತ ಒಂದು ವರ್ಷ ಜೂನಿಯರ್ ಆಗಿ ನಿನ್ನ ಪರಿಚಯ ನನಗಾದದ್ದು. ನಾನು ಕಲಿಯುತ್ತಿದ್ದ ಕಂಪ್ಯೂಟರ್‌ಸೈನ್ಸ್ ಮತ್ತು ನೀನೋದುತ್ತಿದ್ದ ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಶಾಖೆಗಳ ವಿದ್ಯಾರ್ಥಿಗಳೆಲ್ಲ ಹೇಗೆ ಹೆಚ್ಚೂಕಡಿಮೆ ಏಕಲವ್ಯರಾಗಿಯೇ ವಿದ್ಯಾರ್ಜನೆ ಮಾಡಿ ಪದವಿ ಗಳಿಸಿ ಪ್ರಪಂಚಕ್ಕೆ ಧುಮುಕಿದೆವು ಎನ್ನುವುದು ನಿನಗೆ ಗೊತ್ತೇ ಇದೆ. ಎಲ್ಲ ವಿಷಯಗಳಿಗೂ ಸರಿಯಾಗಿ ಉಪನ್ಯಾಸಕರಿಲ್ಲದೆಯೇ ಪಠ್ಯ/ಪಠ್ಯೇತರ ಮತ್ತು ಪೂರಕ ಶಿಕ್ಷಣದ ಚಟುವಟಿಕೆಗಳನ್ನು ನಾವಾಗಿಯೇ ನಿಭಾಯಿಸಿಕೊಂಡದ್ದು ಒಂದು ದೃಷ್ಟಿಯಲ್ಲಿ ನಮಗೆ ಒಳ್ಳೆಯದನ್ನೇ ಮಾಡಿತು ಎಂದು ನನಗನಿಸುತ್ತದೆ. ಉದಾಹರಣೆಗೆ ಆ ದಿನಗಳಲ್ಲಿ ನೀನೇ ವಿನ್ಯಾಸಗೊಳಿಸಿ ಕಾರ್ಯರೂಪಕ್ಕೆ ತಂದಿದ್ದ ಆ ಮೀಡಿಯಂವೇವ್ ರೇಡಿಯೊ ಸ್ಟೇಷನ್! ಹಾಸ್ಟೆಲ್‌ನಲ್ಲಿ ರಾತ್ರಿಹೊತ್ತು/ರಜಾದಿನಗಳಂದು ನಿನ್ನ ಕೊಠಡಿಯಿಂದ ಅದರ ಬ್ರಾಡ್‌ಕಾಸ್ಟಿಂಗ್! ನಾವೆಲ್ಲ ಅದರಲ್ಲಿ ಚಿತ್ರಗೀತೆ ಕೇಳುತ್ತಿದ್ದುದು, ಅದುವರೆಗೂ ಧಾರವಾಡ-ಭದ್ರಾವತಿ ಮಾತ್ರ ಕೇಳುತ್ತಿದ್ದ ನಮಗೆ ನಿನ್ನ ಪ್ರಾಯೋಗಿಕ ಪ್ರಸಾರಗಳಿಂದಾಗಿ ಇದೇನಪ್ಪಾ ದಾವಣಗೆರೆಯಲ್ಲೂ ಆಕಾಶವಾಣಿ ಕೇಂದ್ರ ಆರಂಭವಾಯಿತೇ ಎಂದು ಅಚ್ಚರಿಯೆನಿಸಿದ್ದು ನನಗೀಗಲೂ ನೆನಪಿದೆ. ಹಾಗೆಯೇ ಎಲೆಕ್ಟ್ರಾನಿಕ್-ಫಾರ್-ಯು ಮ್ಯಾಗಜಿನ್‌ನಲ್ಲಿ ಪ್ರಕಟವಾಗುತ್ತಿದ್ದ ನಿನ್ನ ತಂತ್ರಜ್ಞಾನ ವ್ಯಂಗ್ಯಚಿತ್ರಗಳು, ದಾವಣಗೆರೆಯ ಜನತಾವಾಣಿ, ನಗರವಾಣಿ ಪತ್ರಿಕೆಗಳಲ್ಲಿ ಬರುತ್ತಿದ್ದ ನಿನ್ನ ಪಾಕೆಟ್-ಕಾರ್ಟೂನ್‌ಗಳು, ನಮ್ಮ ಕಾಲೇಜ್‌ಡೇ, ಹಾಸ್ಟೆಲ್‌ಡೇ ಸಮಾರಂಭಗಳ ವೇಳೆ ನಿನ್ನ ಕಲಾಪ್ರದರ್ಶನಗಳು... ಬಹುಶಃ ಅವನ್ನೆಲ್ಲ ಗಮನಿಸಿ ಮೆಚ್ಚಿಕೊಂಡೇ ನಾನು ನಿನ್ನ ಆಟೊಗ್ರಾಫ್ ಪುಸ್ತಕದಲ್ಲಿ ''ಒಬ್ಬ ಅಭಿಯಂತರನಾಗಿ, ತಂತ್ರಜ್ಞಾನ ನಿಪುಣನಾಗಿ, ಜತೆಯಲ್ಲೇ ಒಬ್ಬ ವ್ಯಂಗ್ಯಚಿತ್ರಕಾರನಾಗಿ, ಕಲಾವಿದನಾಗಿ, ಪರಿಪೂರ್ಣ ವ್ಯಕ್ತಿಯಾಗಿ ನಿನ್ನ ಬದುಕು-ಭವಿಷ್ಯ ಉಜ್ವಲವಾಗಿರಲಿ'' ಎಂದು ಬರೆದಿದ್ದೆ! (ನನ್ನ ಹಸ್ತಾಕ್ಷರಗಳಿದ್ದ ಆ ಪುಟವನ್ನಷ್ಟೇ ಸ್ಕ್ಯಾನ್ ಮಾಡಿ ಅದನ್ನು ಇಮೇಲ್‌ನಲ್ಲಿ ಕಳಿಸಿ ಕೆಲವರ್ಷಗಳ ಹಿಂದೆ ನೀನು ನನಗೊಂದು ಸರ್ಪ್ರೈಸ್ ಕೊಟ್ಟಿದ್ದೆ; ಕಾಲೇಜು ದಿನಗಳ ನೆನಪನ್ನು ಮರುಕಳಿಸಿದ್ದೆ)



ಸ್ವಾಮಿ, ನನಗೆ ಅತ್ಯಂತ ಖುಷಿಯೆನಿಸುವುದು ಏನ್‌ಗೊತ್ತಾ? ನಾನು ಆಟೊಗ್ರಾಫ್‌ನಲ್ಲಿ ಬರೆದಿದ್ದ ಆ ಹಾರೈಕೆಗಳನ್ನೆಲ್ಲ ನೀನು ಅಕ್ಷರಶಃ ಸಾಧಿಸಿತೋರಿಸುತ್ತ ಮುನ್ನಡೆದಿರುವುದು! ಬಿಡಿಟಿಯಲ್ಲಿ ಶಿಕ್ಷಣದ ನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದೆ; ಅಲ್ಲೂ ನಿನ್ನ ಪ್ರತಿಭೆಯನ್ನು ಮೆರೆದೆ. ವಿದ್ಯಾರ್ಜನೆಯ ನಂತರ ಉದ್ಯೋಗಪರ್ವ ಆರಂಭಿಸಿ ಮೊದಲು 'ಕ್ಯಾಡೆನ್ಸ್ ಡಿಸೈನ್ ಸಿಸ್ಟಮ್ಸ್' ಕಂಪನಿಯಲ್ಲಿ, ಆಮೇಲೆ ಜಗದ್ವಿಖ್ಯಾತ 'ಸನ್ ಮೈಕ್ರೊಸಿಸ್ಟಮ್ಸ್' ಕಂಪನಿಯಲ್ಲಿ ಉದ್ಯೋಗಿಯಾಗಿ ಅಲ್ಲೂ ಜಯಭೇರಿ ಬಾರಿಸಿದೆ. ಆ ಕಂಪನಿಗಳು ನಿನ್ನ ಎಲೆಕ್ಟ್ರಾನಿಕ್ ಚಿಪ್ ವಿನ್ಯಾಸಗಳಿಗೆ ಪೇಟೆಂಟ್ ಸಲ್ಲಿಸಿವೆಯೆಂಬ ಸಂತೋಷದ ಸುದ್ದಿ, ಅಮೆರಿಕದಲ್ಲಿ ನೀನು ಸನ್ ಮೈಕ್ರೊ ಸಿಸ್ಟಮ್‌ಗೆ ಕೆಲಸ ಮಾಡುತ್ತಿದ್ದಾಗ ವಿಶ್ವವ್ಯಾಪಿ ಟಾಪ್-25 ಉದ್ಯೋಗಿಗಳ ಪಟ್ಟಿಯಲ್ಲಿ ನಿನ್ನ ಹೆಸರೂ ಸೇರಿಕೊಂಡ ಸಾಧನೆಯ ಸುದ್ದಿ, ಹಾಗೆಯೇ ಸಿಸ್ಕೋ, ಡೆಲ್ ಮುಂತಾದ ದೊಡ್ಡ ಕಂಪನಿಗಳಲ್ಲೂ ನೀನು ಉನ್ನತ ಸ್ಥಾನಗಳನ್ನು ನಿರ್ವಹಿಸಿ ಸಾಧನೆ ತೋರಿದ ಸಮಾಚಾರ- ಇವನ್ನೆಲ್ಲ ನೀನು ಅದೆಷ್ಟು ಸಂಕೋಚದಿಂದ, ವಿನಯದಿಂದ ನನಗೆ ತಿಳಿಸಿದ್ದೀ, ಆವಾಗೆಲ್ಲ ನಿನ್ನ ಬಗ್ಗೆ ನನಗೆ ತುಂಬ ಹೆಮ್ಮೆಯೆನಿಸಿದೆ. ಅಭಿಮಾನವಾಗುವ ಇನ್ನೊಂದು ಸಂದರ್ಭವೆಂದರೆ ಪ್ರತಿಸಲವೂ ನಿನ್ನ ಕನ್ನಡ ಕಾರ್ಟೂನ್‌ಗಳು ಫಾರ್ವರ್ಡ್ ಇಮೇಲ್‌ಗಳಲ್ಲಿ ಸೈಬರ್‌ಲೋಕ ಸಂಚರಿಸಿ ನನಗೂ ತಲುಪಿದಾಗ. ಏಕೆಂದರೆ ಅವತ್ತು ನಾನು ಬರೆದಿದ್ದ ಆಟೊಗ್ರಾಫ್‌ನಲ್ಲಿ ಆ ಹಾರೈಕೆಯೂ ಇತ್ತಲ್ಲ!

ಅಮೆರಿಕದಲ್ಲಿರುತ್ತ ನೀನು ಇಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾಗ ನಿನ್ನ ಜತೆ ಕೆಲಸ ಮಾಡಿದವರು ನಿನ್ನ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ನಾನಿಲ್ಲಿ ಉಲ್ಲೇಖಿಸಲೇಬೇಕು. 2004ರಲ್ಲಿ ಫ್ಲೋರಿಡಾದಲ್ಲಿ ನಡೆದ 'ಅಕ್ಕ' ವಿಶ್ವಕನ್ನಡ ಸಮ್ಮೇಳನದ ಸ್ಮರಣಸಂಚಿಕೆಯ ಸಂಪಾದಕ ಡಾ.ಯು.ಬಿ. ವಾಸುದೇವ್ ಅವರು ನಿನ್ನ ಬಗ್ಗೆ ನನ್ನಲ್ಲಿ ಹೇಳಿದ್ದು ಹೀಗೆ- ''ಜನಾರ್ದನಸ್ವಾಮಿಯ ಜತೆ ಕೆಲಸ ಮಾಡುವುದೆಂದರೆ ಅದೊಂದು ಸುಯೋಗವೇ ಸೈ. ಅಬ್ಬಾ! ಹಿಡಿದ ಕೆಲಸವನ್ನು ತಪಸ್ಸಿನಂತೆ ಸಾಧಿಸುವ ಏಕಾಗ್ರತೆ ಈ ಮನುಷ್ಯನಲ್ಲಿರುವಂತೆ ನಾನು ಬೇರಾರಲ್ಲೂ ನೋಡಿಲ್ಲ. ಅವನು ರಚಿಸಿದ ಮುಖಪುಟ ನಮ್ಮ ಸಂಚಿಕೆಗೆ ಅತ್ಯದ್ಭುತ ಮೆರುಗು ತಂದಿದೆ!'' ನೆನಪಿರಲಿ, ಆಗಿನ್ನೂ ಅವರಿಗೆ ನೀನೂ ನಾನೂ ಕಾಲೇಜ್‌ಮೇಟ್ಸ್/ಪರಿಚಿತರು ಎಂದು ಗೊತ್ತಿರಲಿಲ್ಲ, ಹಾಗಾಗಿ ಮುಖಸ್ತುತಿಗೆಂದು ಅದನ್ನವರು ಹೇಳಿದ್ದಲ್ಲ. ಸ್ವಾರಸ್ಯವೆಂದರೆ 2006ರ 'ಅಕ್ಕ' ಸಮ್ಮೇಳನ ಸ್ಮರಣಸಂಚಿಕೆಯ ಸಂಪಾದಕತ್ವ ವಹಿಸಿದ ಡಾ.ಮೈ. ಶ್ರೀ. ನಟರಾಜ್ ನಿನ್ನ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯವೂ ಅದೇ! ಅಷ್ಟೇ ಸಾಕಲ್ಲ ನೀನು 'ಮುಖನೋಡಿ ಮಣೆಹಾಕುವ' ಪೈಕಿಯಲ್ಲ, ಕೈಗೊಂಡ ಕೆಲಸವನ್ನು ಶ್ರದ್ಧೆಯಿಂದ, ನಿಷ್ಠೆಯಿಂದ, ನಿರ್ಮಲ ಮನಸ್ಸಿನಿಂದ ಮಾಡಿ ಮುಗಿಸುವ ಛಲದ ವ್ಯಕ್ತಿತ್ವದವನೆಂದು ತಿಳಿಯಲು. ಅದಕ್ಕಿಂತಲೂ ನಿಖರವಾಗಿ ನಿನ್ನ ಬಗ್ಗೆ ಮೆಚ್ಚುಗೆ ನಾನು ಕೇಳಿದ್ದು ಸ್ನೇಹಿತ ಶಾಮಸುಂದರ್ (ದಟ್ಸ್‌ಕನ್ನಡ ವೆಬ್‌ಪತ್ರಿಕೆಯ ಸಂಪಾದಕ) ಅವರಿಂದ. 2002ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನಿನ್ನನ್ನು ಭೇಟಿಯಾಗಿ, ನೀನು ಕೆಲಸ ಮಾಡುವ ಕಚೇರಿಯನ್ನು ಪ್ರಯೋಗಾಲಯಗಳನ್ನೂ ಸಂದರ್ಶಿಸಿ ವಾಷಿಂಗ್ಟನ್‌ಗೆ ಮರಳಿದ್ದ ಶಾಮ್ ನಿನ್ನ ಬಗ್ಗೆ ಹೇಳಿದ್ದೇನು ಗೊತ್ತಾ? ''Stay focused and achieve your goals ಎಂಬುದನ್ನು ಜನಾರ್ದನ ಸ್ವಾಮಿಯಿಂದ ಕಲಿಯಬೇಕು!''

ಸರಿ, ಇದಿಷ್ಟನ್ನು ನಾನು ಬರೆದದ್ದು ನಿನಗೆ ಮುಜುಗರ ತರಲಿಕ್ಕಲ್ಲ, ಮೊದಲೇ ಸಂಕೋಚ ಸ್ವಭಾವದವನಾದ ನಿನ್ನನ್ನು ಮೌನಿಯಾಗಿಸಲಿಕ್ಕಲ್ಲ. ಸಾಫ್ಟ್‌ವೇರ್ ಎಂಜಿನಿಯರಿಂಗ್ ಕ್ಷೇತ್ರವನ್ನು ಬಿಟ್ಟು ಸಕ್ರಿಯ ರಾಜಕಾರಣಕ್ಕೆ ಧುಮುಕಿ, ಈಸಲದ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದ ಚಿತ್ರದುರ್ಗ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದಿರುವ ನಿನ್ನ ಬಗ್ಗೆ ಗರ್ವವೆನಿಸುವುದು ನನಗೊಬ್ಬನಿಗೇ ಅಲ್ಲ, ಬಿಡಿಟಿ ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿ/ಹಳೆವಿದ್ಯಾರ್ಥಿಗೂ ಇದು ಹೆಮ್ಮೆಯ ವಿಷಯ. ಬಿಡಿಟಿ ಕಾಲೇಜಿನ ಸರ್ವಾಂಗೀಣ ಏಳಿಗೆಗೆ ನೀನು ಪಟ್ಟಿರುವ ಶ್ರಮ, ಬಿಡಿಟಿ ಹಳೆವಿದ್ಯಾರ್ಥಿಗಳಿಗಾಗಿಯೇ ನೀನು ಮನ-ಧನ, ವಿರಾಮದ ಸಮಯವನ್ನೆಲ್ಲ ವ್ಯಯಿಸಿ ನಿರ್ಮಿಸಿದ ಸಂಪೂರ್ಣ ಸ್ವಯಂನಿರ್ವಹಿತ ವೆಬ್‌ಸೈಟ್ (www.ubdtaa.com) ಇವನ್ನೆಲ್ಲ ನೋಡಿದ ಯಾರಿಗಾದರೂ ಮನವರಿಕೆಯಾಗಬೇಕು ನೀನು 'ಅಟ್ಟ ಹತ್ತಿದ ಮೇಲೆ ಏಣಿ ಮರೆಯುವ' ಕೃತಘ್ನನಲ್ಲವೆಂದು. ಅಸಲಿಗೆ ನಿನ್ನ ಸಂದರ್ಭದಲ್ಲಿ ಆ ನಾಣ್ಣುಡಿಯನ್ನು 'ಅಟ್ಟದಿಂದಿಳಿದು, ಇತರರೂ ಹತ್ತುವುದು ಸಾಧ್ಯವಾಗುವಂತೆ ಏಣಿಯನ್ನು ಬಲಪಡಿಸುವವ' ಎಂದು ಬದಲಾಯಿಸಬೇಕು. ಏಕೆಂದರೆ, ಹಳ್ಳಿಯಲ್ಲಿ ಮಣ್ಣಿನ ಗುಡಿಸಲಲ್ಲಿ ಹುಟ್ಟಿ ಬೆಳೆದ ನೀನು ಅಮೆರಿಕವೆಂಬ ಅಮರಾವತಿಯನ್ನು ತೊರೆದು ಮಾತೃಭೂಮಿಗೆ ಮರಳಿ ಹಳ್ಳಿಹಳ್ಳಿಗಳ ಏಳಿಗೆಯ ಕನಸನ್ನು ಕಂಡು ಒಂದು ಹೊಸ ತಪಸ್ಸಿಗೆ ತೊಡಗಿದ್ದೀಯಲ್ಲ, ನಿನ್ನೀ ನಿರ್ಧಾರವನ್ನು ನೋಡಿದ ಯಾರಿಗಾದರೂ ಗರ್ವವೆನಿಸಬೇಕು.

ಇದನ್ನು ನಾನು ಬರೆಯುತ್ತಿರುವುದು ''ರಾಜಕಾರಣಿಯಾಗಿದ್ದೀಯಲ್ಲ ಅದನ್ನು ಮಾಡಿಕೊಡು ಇದನ್ನು ಮಾಡಿಕೊಡು...'' ಎಂದು ಬೇಡಿಕೆ ಸಲ್ಲಿಸುವುದಕ್ಕಲ್ಲ, ಬೆಣ್ಣೆ ಹಚ್ಚುವುದಕ್ಕಲ್ಲ, ಅವರಂತಾಗು ಇವರಂತಾಗು ಎಂದು ಬೇರೆಯವರ ಆದರ್ಶಗಳನ್ನು ಹೇರುವುದಕ್ಕಲ್ಲ, ನನ್ನ ಹಾರೈಕೆ (ಕೋರಿಕೆಯೆಂದರೂ ಸರಿ) ಏನೆಂದರೆ, ನೀನು ಯಾರಂತೆಯೂ ಆಗುವುದು ಬೇಡ. ನೀನು ನೀನೇ ಆಗಿರು, ಏನಾಗಬಯಸಿರುವೆಯೋ ಅದರಲ್ಲಿ ಅತ್ಯುತ್ತಮನಾಗು. ಸರ್ವಶ್ರೇಷ್ಠ ಎಂಜಿನಿಯರ್ ಆಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ಹೇಳಿದ Be the best of whatever you are ಎನ್ನುವ ಮಾತು ನಮಗೆಲ್ಲರಿಗೂ ಆದರ್ಶ ತಾನೆ? ಇವತ್ತು ರಾಜಕೀಯ ಅಂದರೆ ರಾವಣ, ಜರಾಸಂಧ, ಕೀಚಕ, ಯಮ ಅಂಥವರೇ ಅದರಲ್ಲಿರೋದು ಎನ್ನುವಷ್ಟು ಹದಗೆಟ್ಟಿರುವಾಗ ಆ ಕೆಸರಿನ ಕೊಳಕ್ಕಿಳಿದಿರುವ ನೀನು 'ನಳಿನೀಪತ್ರಮಿವಾಂಭಸಿ' ಅಂದರೆ ಕೆಸರಿನಲ್ಲಿನ ಕಮಲದೆಲೆಯಂತಾಗು. ಇನ್ನೂ ಆಶಾವಾದದಿಂದ ಹೇಳುವುದಾದರೆ- ಕೊಚ್ಚೆಸಮುದ್ರವನ್ನು ಉಲ್ಲಂಘಿಸಿ, ಕಳೆದುಹೋಗಿರುವ ಸ್ವಚ್ಛ-ಸಮರ್ಥ-ಶಿಸ್ತಿನ ರಾಜಕಾರಣವೆಂಬ ಸೀತೆಯನ್ನು ಹುಡುಕಿತರುವ ಹನುಮಂತನಾಗು! ಸ್ವಾಮಿ, ಈ ಚುನಾವಣೆಯಲ್ಲಿ ನೀನು ಗೆಲ್ಲುತ್ತೀ, ಗೆಲ್ಲಬೇಕು. ಒಂದುವೇಳೆ ಸೋತರೆ ಅದು ನಿನ್ನ ಸೋಲಲ್ಲ, ಚಿತ್ರದುರ್ಗದ ಪ್ರತಿಯೊಬ್ಬ ಮತದಾರನ ಸೋಲು. ಭಾರತೀಯ ಪ್ರಜಾಪ್ರಭುತ್ವದ ಸೋಲು. ಹಳ್ಳಿಗಳ ಅಭಿವೃದ್ಧಿಯ ಕನಸಿನ ಸೋಲು. ಹಾಗಾಗದಿರಲಿ. ದೇವರು ನಿನ್ನ ಛಲವನ್ನು ಜೀವಂತವಾಗಿಟ್ಟಿರಲಿ. ಜನಸೇವೆಯ ನಿನ್ನ ಕನಸು ನನಸಾಗಲಿ, ಎಲ್ಲಕ್ಕಿಂತ ಹೆಚ್ಚಾಗಿ ''ಪರಿಪೂರ್ಣ ವ್ಯಕ್ತಿಯಾಗಿ ನಿನ್ನ ಬದುಕು-ಭವಿಷ್ಯ ಉಜ್ವಲವಾಗಿರಲಿ'' ಎಂಬ ನನ್ನ ಆಟೊಗ್ರಾಫ್ ಹಾರೈಕೆಯಿತ್ತಲ್ಲ ಅದು ಸತ್ಯವಾಗಲಿ, ನಿನಗೆ ಒಳ್ಳೆಯದಾಗಲಿ, ಜೈ ಹೋ!